**ದಳ್ಳಾಳಿ ರಹಿತ ಮಾರುಕಟ್ಟೆ**

2298 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಮಾರುಕಟ್ಟೆ ದಳ್ಳಾಳಿ ಇಲ್ಲದೆಯೇ ರೈತರ ಉತ್ಪತ್ತಿ ಮಾರಾಟ ಮಾಡಲು ಸಾಧ್ಯವೆಂಬುದನ್ನು ಸರ್ಕಾರಕ್ಕೆ ಗೊತ್ತಿದೆಯೇ?*

*ಆ) ದಲ್ಲಾಲರನ್ನು ಮಾರುಕಟ್ಟೆಯಿಂದ ಹೊರ ಹಾಕದೆ ರೈತರ ಶೋಷಣೆ ತಪ್ಪಿಸಲು ಸಾಧ್ಯವಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿದೆಯೇ?*

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ಹೌದು.

ಆ) ದಲ್ಲಾಲಿ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆ ಆಗುವವರೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ದಲ್ಲಾಲಿ ವರ್ಗವನ್ನು ಮುಂದುವರಿಸಬೇಕಾಗುತ್ತದೆ. ದಲ್ಲಾಲರಿಂದ ರೈತರಿಗಾಗುವ ಶೋಷಣೆಯನ್ನು ತಪ್ಪಿಸಲು ಕಾಯ್ದೆಯಡಿಯಲ್ಲಿ ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಾಗಿದೆ.

**ಹಾಸನ ಮಹಿಳಾ ಪಾಲಿಟೆಕ್ನಿಕ್ ಕಟ್ಟಡ ದುರಸ್ತಿ**

2429 - ಶ್ರೀ ಕೆ.ಹೆಚ್. ಹನುಮೇಗೌಡ, (ಹಾಸನ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

*ಅ) ಹಾಸನ ಮಹಿಳಾ ಪಾಲಿಟೆಕ್ನಿಕ್ ಕಟ್ಟಡವು ತುಂಬಾ ಶಿಥಿಲವಾಗಿದ್ದು ಮಳೆಗಾಳಿಯಿಂದ ರಕ್ಷಣೆ ಇಲ್ಲದೆ ವಿದ್ಯಾರ್ಥಿನಿಯರು ತುಂಬಾ ತೊಂದ್ರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?*

*ಆ) ಈ ಕಟ್ಟಡದ ನಿರ್ಮಾಣವನ್ನು ವಿಶ್ವ ಬ್ಯಾಂಕ್ ಸಹಾಯದಿಂದ ಕಟ್ಟಲು ಸಾಧ್ಯವಿಲ್ಲವೆ, ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?*

*ಇ) ವಿಶ್ವಬ್ಯಾಂಕ್ ಸಹಾಯದಿಂದ ಖಾಸಗಿ ಪಾಲಿಟೆಕ್ನಿಕ್‌ಗಳ ಕಟ್ಟಡ ಕಟ್ಟುವ ಕಾರ್ಯ ಕ್ರಮವೇನಾದರೂ ಸರ್ಕಾರ ಕೈಗೊಡಿರುವುದು ನಿಜವೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :

ಅ) ಬಂದಿದೆ.

ಆ) ವಿಶ್ವಬ್ಯಾಂಕ್ ನೆರವಿನ ಯೋಜನೆಯಲ್ಲಿ ಅಳವಡಿಸಲು, ಸಂಬಂಧಿಸಿದ ಸಂಸ್ಥೆಯು ಎ.ಐ.ಸಿ.ಟಿ.ಇ.ಯಿಂದ ಮಾನ್ಯತೆ ಪಡೆದಿರಬೇಕು. ಹಾಸನದ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕೌನ್ಸಿಲ್‌ನಿಂದ ಇನ್ನೂ ಅನುಮೋದಿತವಾಗಿಲ್ಲ. ಅದಾಗ್ಯೂ, ಅಂತಹ ಅನುಮೋದನೆಯನ್ನು ಕಾಯ್ದಿರಿಸಿ, ಈ ಪಾಲಿಟೆಕ್ನಿಕ್‌ನ ಕಟ್ಟಡದ ಕೆಲಸವನ್ನು 1991-92ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ, ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ವಿಶ್ವಬ್ಯಾಂಕ್ ಯೋಜನೆಯ ಕೆಪಾಸಿಟಿ ಎಕ್ಸ್‌ಪ್ಯಾನ್‌ಷನ್ ಕಾರ್ಯಕ್ರಮದಲ್ಲಿ, ಖಾಸಗಿ ಅನುದಾನಿತ ಸಂಸ್ಥೆಯಾದ ಜೆ.ಎಸ್. ಮಹಿಳಾ ಪಾಲಿಟೆಕ್ನಿಕ್‌ನ ವಿದ್ಯಾರ್ಥಿನಿಲಯ ಕಟ್ಟಡ ಕಟ್ಟಲು, ಆಯ್ಕೆ ಮಾಡಿಕೊಳ್ಳಲಾಗಿದೆ.

**ರಾಜ್ಯದಲ್ಲಿ ಇಂಜಿನೀಯರಿಂಗ್ ಶಿಕ್ಷಣದ ಬಗ್ಗೆ**

2224 - ಶ್ರೀ ವಿಜಕುಮಾರ ಶೆಟ್ಟಿ, (ಸುರತ್ಕಲ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ರಾಜ್ಯದಲ್ಲಿ ಇಂಜಿನೀಯರಿಂಗ್ ಶಿಕ್ಷಣದ ಪಠ್ಯ ಕ್ರಮಗಳನ್ನು ಎಂದು ಪುನರ್ ರಚಿಸಲಾಯಿತು? (ಎಷ್ಟು ಸಮಯವಾಗಿದೆ)*

ಅ) ಇಂಜಿನೀಯರಿಂಗ್ ಶಿಕ್ಷಣ ಕ್ಷೇತ್ರದ ವಿವಿಧ ಪ್ರಕಾರಗಳ ಆಗುತ್ತಿರುವ ವೇಗಕ್ಕೆ ಪೂರಕವಾದ ಶಿಕ್ಷಣ ಕ್ರಮ ರಾಜ್ಯದಲ್ಲಿ ಜಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಇ) ಇಂಜಿನೀಯರಿಂಗ್ ಶಿಕ್ಷಕರಿಗೆ ತರಬೇತಿ ನೀಡಲು ಸರ್ಕಾರ ನೂತನ ಕ್ರಮವನ್ನೇನಾದರೂ ತರಲುದ್ದೇಶಿಸಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೆಂಗಳೂರು ವಿಶ್ವವಿದ್ಯಾಲಯ 1981,

ಮೈಸೂರು ವಿಶ್ವವಿದ್ಯಾಲಯ 1986

ಗುಲ್ಬರ್ಗಾ ವಿಶ್ವವಿದ್ಯಾಲಯ 1991

ಮಂಗಳೂರು ವಿಶ್ವವಿದ್ಯಾಲಯ 1983

1985 ಮತ್ತು 1986.

ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯದ ಪಠ್ಯಕ್ರಮವನ್ನು ಪಾಲಿಸುತ್ತದೆ.

ಆ) ತಾಂತ್ರಿಕ ಕಾಲೇಜಿನ ಸಿಬ್ಬಂದಿಗೆ ತರಬೇತಿ ನೀಡಲು ಭಾರತದ ತಾಂತ್ರಿಕ ಶಿಕ್ಷಣ ಸಂಘವು ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಗುಣಮಟ್ಟ ಸುಧಾರಣಾ ಕಾರ್ಯಕ್ರಮದಲ್ಲಿ ತಾಂತ್ರಿಕ ಕಾಲೇಜುಗಳ ಉಪನ್ಯಾಸಕರುಗಳನ್ನು ಎಂ.ಟೆಕ್. ಮತ್ತು ಪಿಹೆಚ್.ಡಿ. ವ್ಯಾಸಂಗ ಮಾಡಲು ಕಳುಹಿಸಲಾಗುತ್ತಿದೆ.

**ಕೊಡಗು ಜಿಲ್ಲೆಯ ಪ್ರೌಢಶಾಲೆಗಳ ಅಧ್ಯಾಪಕರ ಸಂಖ್ಯೆ**

2262 - ಶ್ರೀಮತಿ ಸುಮಾ ವಸಂತ (ವೀರಾಜಪೇಟೆ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಯಿಸುತ್ತಿರುವ ಸರ್ಕಾರಿ ಪ್ರೌಢಶಾಲೆಯ ಅಧ್ಯಾಪಕರ ಒಟ್ಟು ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ)

ಆ) ಕೊರತೆ ಇರುವ ಶಿಕ್ಷಕರು ಸಂಖ್ಯೆ ಎಷ್ಟು ? (ಹುದ್ದೆವಾರು) ಹಾಗೂ ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು.

ಇ) ಈ ಕೊರತೆಯನ್ನು ಯಾವಾಗ ಸರಿಪಡಿಸಬಾಗುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) 1) ವೀರಾಜಪೇಟೆ 60

2) ಸೋಮವಾರಪೇಟೆ 66

3) ಮಡಿಕೇರಿ 46